**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 232/2017
ಪಿಡಬ್ಲು : 4 ಸಿಡಬ್ಲು : 4

| | |
|---|---|
| ಸಾಕ್ಷಿಯ ಹೆಸರು | : ಹಣಮಂತ ಸಿದ್ದಪ್ಪ ಉದ್ದವ್ವಗೋಳ |
| ವಯಸ್ಸು | : 25 ವರ್ಷ |
| ಉದ್ಯೋಗ | : ಒಕ್ಕಲುತನ |
| ವಾಸ್ತವ್ಯ | : ಕೌಜಲಗಿ |
| ದಿನಾಂಕ | : 27-09-2019 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ**

ಚಾಸಾ-5 ಗೊತ್ತು . ಆತನು ನನ್ನ ಸಂಬಂಧಿಕನಾಗಬೇಕು . ದಿನಾಂಕಃ 22-04-2017 ರಂದು ವೈಯಕ್ತಿಕ ಕೆಲಸದ ಮೇಲೆ ಕುಲಗೋಡ ಪೋಲಿಸಠಾಣೆಗೆ ಹೋಗಿದ್ದು , ಸಾಯಂಕಾಲ 7.00 ಗಂಟೆಗೆ ಠಾಣೆಯಲ್ಲಿ ಫ್ರಾಸಾ-1 ರವರು ಹಾಜರಿದ್ದು ಅವರು ಒಂದು ರಕ್ತ ಹತ್ತಿದ ನೆಹರೂ ಶರ್ಟು ಮತ್ತು ರಕ್ತ ಹತ್ತಿದ ಛತ್ರಿಯನ್ನು ಪೋಲಿಸರ ಮುಂದೆ ಹಾಜರುಪಡಿಸಿರುತ್ತಾರೆ . ಪೋಲಿಸರು ಅವುಗಳನ್ನು ಮಹಜರು ಮಾಡಿ ಅಮಾನತುಪಡಿಸಿಕೊಂಡಿರುತ್ತಾರೆ . ಸದರಿ ಮಹಜರನ್ನು ನಿಪಿ-8 ಎಂದು , ಸಾಕ್ಷಿದಾರರ ಸಹಿಯನ್ನು ನಿಪಿ-8 ಎ ಎಂದು ಗುರುತಿಸಲಾಯಿತು . ಶರ್ಟು ಮತ್ತು ಛತ್ರಿಗಳನ್ನು ನೋಡಿದರೆ ಗುರುತಿಸಬಲ್ಲೆ ಅವುಗಳನ್ನು ಮುಮಾ -3 ಮತ್ತು 4 ಎಂದು ಈಗಾಗಲೇ ಗುರುತಿಸಲಾಗಿದೆ .

**ಪಾಟೀ ಸವಾಲು: ಶ್ರೀ. ಬಿ ಎಸ ಡಿ ವಕೀಲರಿಂದ ಆರೋಪಿತನ ಪರವಾಗಿ**

ಕೌಜಲಗಿ ಮತ್ತು ಯಾದವಾಡ ಗ್ರಾಮ ಸುಮಾರು 20 ಕಿ ಮೀ ಅಂತರದಲ್ಲಿರುತ್ತವೆ . ಕೌಜಲಗಿಯಿಂದ ಕುಲಗೋಡ ಪೋಲಿಸಠಾಣೆ ಸುಮಾರು 5 ಕಿ ಮೀ ಇರುತ್ತದೆ . ನಾನು ಕೌಜಲಗಿ

ಗ್ರಾಮದಲ್ಲಿ ವಾಸವಾಗಿರುತ್ತೇನೆ ಎಂದರೆ ಸರಿ . ಕುಲಗೋಡ ಪೋಲಿಸಠಾಣೆಯಲ್ಲಿ ನಾನು ಕಸಗೂಡಿಸುವುದು ಮತ್ತು ಇತರ ಕೆಲಸ ಮಾಡುತ್ತೇನೆ ಎಂದರೆ ಸರಿಯಲ್ಲ . ನನ್ನನ್ನು ನಮ್ಮ ಪೋಲಿಸ ಸಾಹೇಬರೇ ಆ ಸಮಯದಲ್ಲಿ ಕರೆದಿರುತ್ತಾರೆ . ನಮ್ಮ ಪೋಲಿಸ ಸಾಹೇಬರು ಸಹಿ ಮಾಡು ಎಂದರು ಮಾಡಿರುತ್ತೇನೆ ಎಂದರೆ ಸರಿ . ಆ ಸಮಯದಲ್ಲಿ ಯಾವ ಪೋಲಿಸ ಸಾಹೇಬರು ಇದ್ದರು , ಅವರ ಹೆಸರೇನು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ . ಆ ಸಮಯದಲ್ಲಿ ಮುಮಾ-3 ಮತ್ತು 4 ಶರ್ಟು ಹಾಗೂ ಛತ್ರಿಗಳನ್ನು ನನ್ನ ಸಮಕ್ಷಮ ಜಪ್ತ ಮಾಡಿಕೊಂಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಾನು ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎದರೆ ಸರಿಯಲ್ಲ .

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನ ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಜಿ.ನಂಜುಂಡಯ್ಯ)
3 ನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು, ಬೆಳಗಾವಿ.